


ಮಳೆ–ಗಾಳಿ, ಬಿಸಿಲು–ಚಳಿ, ಚಂಡಮಾರುತ ಸೇರಿದಂತೆ ಪ್ರಾಕೃತಿಕ ವಿದ್ಯಮಾನಗಳ ಕುರಿತು ಮುನ್ಸೂಚನೆ ನೀಡುವ 'ಭಾರತೀಯ ಹವಾಮಾನ ಇಲಾಖೆ'ಗೆ (ಐಎಂಡಿ) ಈಗ ನೂರೈವತ್ತು ವರ್ಷಗಳ ಸಂಭ್ರಮ. ಸ್ವಾತಂತ್ರ್ಯಪೂರ್ವದ ಈ ಸಂಸ್ಥೆ ದೇಶದ ಹಲವು ಬದಲಾವಣೆಗಳೊಂದಿಗೆ ಬೆಳೆದುಬಂದಿದ್ದು, ಪ್ರಸ್ತುತ ವಿಶ್ವದ ಅತ್ಯಂತ ಸಮರ್ಥ ಹವಾಮಾನ ಕೇಂದ್ರಗಳಲ್ಲೊಂದಾಗಿ ಗುರ್ತಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ 'ಐಎಂಡಿ' ನೀಡಿದ ನಿಖರ ಮುನ್ಸೂಚನೆಯಿಂದಾಗಿಯೇ ಚಂಡಮಾರುತದಂಥ ಪ್ರಾಕೃತಿಕ ವಿಕೋಪಗಳ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ಸಾವುನೋವನ್ನು ಗಣನೀಯವಾಗಿ ತಗ್ಗಿಸಲು ಸಾಧ್ಯವಾಗಿದೆ. ದೇಶದ ಹೆಮ್ಮೆಯ ಸಂಸ್ಥೆ 'ಐಎಂಡಿ'ಯ ಒಂದೂವರೆ ಶತಮಾನಗಳ ಹಾದಿಯ ಮೈಲಿಗಲ್ಲುಗಳನ್ನು ಗುರ್ತಿಸುವ ಈ ಸಂಚಿಕೆಯ 'ಸುಧಾ' ಮುಖಪುಟ ಬರಹ, ವೈಜ್ಞಾನಿಕ ಕ್ಷೇತ್ರದಲ್ಲಿ ಭಾರತ ಮೂಡಿಸಿರುವ ಛಾಪಿಗೆ ಉದಾಹರಣೆಯಂತಿದೆ.

■ ಕೋಡಿಬೆಟ್ಟು ರಾಜಲಕ್ಷ್ಮಿ